

ಸೂರ್ಯಕುಂಡದ ಮೂಲಕ ದೇವಾಲಯದ ಮುಂಭಾಗದ ನೋಟ



ಸೂರ್ಯದೇವನ ಶಿಲ್ಪ

ದೇವಾಲಯ ನಿರ್ಮಾಣವಾದಾಗ, ಅಂದರೆ 990 ವರ್ಷಗಳ ಹಿಂದೆ, ಗರ್ಭಗುಡಿಯಲ್ಲಿ ಚಿನ್ನದಿಂದ ಮಾಡಿದ ಏಳು ಅಡಿ ಎತ್ತರದ ಸೂರ್ಯವಿಗ್ರಹ ಮತ್ತು ಕಿರೀಟದಲ್ಲಿ ವಜ್ರಗಳು ಇದ್ದವೆಂದೂ, ವಿಷುವತ್ ಸಂಕ್ರಾಂತಿ ದಿನ ಸೂರ್ಯನ ಮೊದಲ ಕಿರಣಗಳು ವಿಗ್ರಹದ ಮೇಲೆ ಬಿದ್ದು ಇಡೀ ಗರ್ಭಗುಡಿ ಶೋಭಿಸುತ್ತಿತ್ತೆಂದೂ ಹೇಳುತ್ತಾರೆ. ದಾಳಿಕೋರರ ಆಕ್ರಮಣಕ್ಕೆ ತುತ್ತಾಗಿ ದೇವಾಲಯ ಹಾಳಾಯಿತು ಹಾಗೂ ವಜ್ರಗಳ ಸಮೇತ ಚಿನ್ನದ ವಿಗ್ರಹವನ್ನು ಕದಿಯಲಾಯಿತು ಎಂದು ಹೇಳಲಾಗುತ್ತದೆ.

ಈಗ ಗರ್ಭಗುಡಿಯನ್ನು ಮುಚ್ಚಲಾಗಿದೆ. ಕಾರಣ, 12 ಅಡಿ ಆಳದ ಕತ್ತಲ ಕಂದಕವಲ್ಲದೆ ಬೇರೇನೂ ಅಲ್ಲಿಲ್ಲ. ಗರ್ಭಗುಡಿಯಿಂದ ಹೊರಬಂದರೆ, ಎರಡನೇ ಭಾಗವಾದ ಸಭಾಮಂಟಪ ಅಥವಾ ನೃತ್ಯಮಂಟಪದ ದ್ವಾರವಿದೆ. ಅರ್ಧ ಎತ್ತರದ ಗೋಡೆಗಳು ಹಾಗೂ ಸುಂದರ ಶಿಲ್ಪಗಳಿಂದ ಕೂಡಿದ ಎತ್ತರದ ಕಂಬಗಳಿಂದ ಮಾಡಿದ ಈ ಮಂಟಪವನ್ನು ಮೊದಲನೇ ಭಾಗದ ನಿರ್ಮಾಣದ ಕೆಲವು ವರ್ಷಗಳ ಆನಂತರ ನಿರ್ಮಾಣ ಮಾಡಿರುವ ಸಾಧ್ಯತೆಯನ್ನು ಚರಿತ್ರಕಾರರು ಸೂಚಿಸುತ್ತಾರೆ. ಇಲ್ಲಿನ ಶಿಲ್ಪಗಳು ರಾಮಾಯಣ ಹಾಗೂ ಮಹಾಭಾರತದ ಕಥೆಗಳನ್ನು ಆಧರಿಸಿವೆ. ಅಪ್ಸರೆಯರ, ಯುದ್ಧವೀರರ, ಕುಟುಂಬ ಚಿತ್ರಣಗಳ, ಪುರಾಣಕಥೆಗಳ ಚಿತ್ರಶಿಲ್ಪಗಳ ಜೊತೆಜೊತೆಗೆ ಹೂಬಳ್ಳಿ–ಕುಂಭ ಶಿಲ್ಪಗಳು ಬಹು ಆಕರ್ಷಕವಾಗಿವೆ. ಮನುಷ್ಯನೊಬ್ಬನ ಮುಖಕ್ಕೆ ಐದು ದೇಹಗಳನ್ನು ವಿವಿಧ ಭಂಗಿಗಳಲ್ಲಿ ಜೋಡಿಸಿರುವುದು ಶಿಲ್ಪ ಚಮತ್ಕಾರದ ಒಂದು ಸಣ್ಣ ಉದಾಹರಣೆ. ತಲೆ ಎತ್ತಿ ಗೋಳಾಕಾರದ ಒಳತಾರಸಿಯ ಗುಮ್ಮಟ ನೋಡಿದರೆ, ಅಲ್ಲಿನ ಶಿಲ್ಪವಿನ್ಯಾಸ ನಮ್ಮನ್ನು ಮರುಳುಮಾಡುವಂತಿದೆ.

ಮೂರನೇ ಭಾಗವಾದ ಸೂರ್ಯಕುಂಡವನ್ನು ನೋಡಲು ಕೀರ್ತಿತೋರಣಕಂಬಗಳ ನಡುವೆ ಹಾದು, ಮೆಟ್ಟಿಲುಗಳ ಮೂಲಕ ಕೆಳಗೆ ಇಳಿಯಬೇಕು. ಈ ಕುಂಡ ಅಥವಾ ಕಲ್ಯಾಣಿಯು 108 ಪಿರಮಿಡ್ ಆಕಾರದ ಅಲಂಕಾರಿಕ ಸಣ್ಣಸಣ್ಣ ಉಪಮೆಟ್ಟಿಲುಗಳನ್ನು ಹೊಂದಿದ್ದು, ಹಂಪೆಯಲ್ಲಿನ ಮೆಟ್ಟಿಲು ಮೆಟ್ಟಿಲು ಕಲ್ಯಾಣಿಯನ್ನು ನೆನಪಿಸುತ್ತದೆ. 175 ಅಡಿ ಉದ್ದದ ಹಾಗೂ 125 ಅಡಿ ಅಗಲದ ಈ ಕಲ್ಯಾಣಿಯ ಗೂಡು ಗುಡಿಗಳಲ್ಲಿ ಗಣೇಶ, ಶೇಷಶಾಯಿ ವಿಷ್ಣು, ನಟರಾಜ ಹಾಗೂ ಶೀತಲಮಾತೆಯ ಉಬ್ಬು ಚಿತ್ರಗಳಿವೆ.



ಸಭಾಮಂಟಪದ ಒಳತಾರಸಿಯ ಗುಮ್ಮಟದ ಆಕರ್ಷಕ ಸಮ್ಮಿತಿ (fractal) ಕೆತ್ತನೆ

ವೇದೋಪನಿಷತ್ತುಗಳು, ಪುರಾಣಗಳು, ಸ್ಮೃತಿಗಳು, ರಾಮಾಯಣ ಹಾಗೂ ಮಹಾಭಾರತ ಇವುಗಳೆಲ್ಲವೂ ಪರಿಸರವನ್ನು ಕಾಪಾಡುವ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದೊಂದಿಗೆ ಬದುಕುವ ಸಂದೇಶ ಕೊಡುತ್ತವೆ ಹಾಗೂ ಅವುಗಳಲ್ಲಿ ದೈವತ್ವ ಕಾಣುವ ಜ್ಞಾನಮಾರ್ಗವನ್ನೂ ಹುಟ್ಟುಹಾಕಿವೆ. ಈ ಪರಿಕಲ್ಪನೆಯನ್ನೇ ನಮ್ಮ ಶಿಲ್ಪಿಗಳು ದೇವಾಲಯಗಳ ಶಿಲ್ಪಗಳಲ್ಲಿ ಮನಮೋಹಕವಾಗಿ ಸೃಷ್ಟಿಸಿರುವುದು. ಹಾಗಾಗಿ ಮೊಢೇರಾ ದೇವಾಲಯದಲ್ಲಿ ಪ್ರಕೃತಿ ಅಂಶಗಳನ್ನೇ ಮುಖ್ಯ ಪಟ್ಟಿಕೆಗಳಲ್ಲಿ ದೈವಗಳಾಗಿ ಕಾಣಿಸಲಾಗಿದೆ ಎನ್ನಬಹುದು.

2014ರಲ್ಲಿ ವಿಶ್ವಸಂಸ್ಥೆಯು ಈ ದೇವಾಲಯವನ್ನು ವಿಶ್ವಪರಂಪರೆಯ ತಾಣ–ಸ್ಮಾರಕ ಎಂದು ಘೋಷಿಸಿದೆ. ವಿಶೇಷ ದಿನಗಳಲ್ಲಿ ದೇವಾಲಯವನ್ನು ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗುತ್ತದೆ.

ಗುಜರಾತ್ ರಾಜ್ಯದ ಪ್ರದೇಶಗಳು ಭೂಕಂಪನಗಳಿಗೆ ಪದೇಪದೇ ತುತ್ತಾಗುತ್ತವೆ. ಮೊಢೇರಾ ದೇವಾಲಯವು ಅಂಥ ಭೂಕಂಪನಗಳನ್ನು ಎದುರಿಸಿ ಇಂದಿಗೂ ದೃಢವಾಗಿ ನಿಂತಿರುವುದು ಆಶ್ಚರ್ಯವೇ ಸರಿ. ಈ ದೇವಾಲಯಕ್ಕೆ ಭೂಕಂಪನಗಳಿಂದ ಆಗಬಹುದಾದ ಪರಿಣಾಮಗಳನ್ನು ಪರಾಮರ್ಶಿಸಲು ಮೂವರು ತಜ್ಞರನ್ನೊಳಗೊಂಡ ತಂಡ ಈಚೆಗೆ ಅಭ್ಯಾಸ ನಡೆಸಿತು. ಇಡೀ ದೇವಾಲಯದ ವಿನ್ಯಾಸದಲ್ಲಿನ ಕಲ್ಲು ಕಂಬಗಳ ನಡುವೆ ಚಾಣಾಕ್ಷತನದಿಂದ ಮಾಡಿರುವ ಬಂಧ ಮತ್ತು ಜೋಡಣೆಗಳಿಂದಾಗಿ, ಭೂಕಂಪನದ ಪರಿಣಾಮಗಳು ಅತೀ ಕಡಿಮೆ ಎಂಬುದು ಇದರಿಂದ ತಿಳಿದುಬಂದಿದೆ.

ಸಾವಿರ ವರ್ಷಗಳ ಮಳೆ–ಬಿಸಿಲು–ಗಾಳಿಯ ತಾಡನಗಳಿಂದ ಅಷ್ಟೇನೂ ಗಟ್ಟಿಯಲ್ಲದ ಮರಳುಶಿಲೆಯ ರಚನೆಗಳು ಶಿಥಿಲಗೊಳ್ಳುತ್ತಿವೆ. ಆದರೆ, ಇಂದಿಗೂ ಶಿಲ್ಪ ಸೌಂದರ್ಯದ ವೈಭವದಿಂದ ಕಂಗೊಳಿಸುತ್ತಿರುವ ಮೊಢೇರಾ ಸೂರ್ಯಮಂದಿರ ಭಾರತೀಯ ಕಲಾಪರಂಪರೆಯ ಸೂರ್ಯನೇ ಆಗಿದೆ.

ಪ್ರತಿಕ್ರಿಯಿಸಿ: feedback@sudha.co.in